**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ಆವಿಎ/ವಿನಿ3/ಪ್ರಾ.ವರ್ಗ/2019-20.

ನಿರ್ದೇಶಕರ ಕಚೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 012
ದಿನಾಂಕ: 16/07/2019

## ಜ್ಞಾಪನ

**ವಿಷಯ:-** 2018-19ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಿರ್ವಹಿಸುವ ಬಗ್ಗೆ.

**ಉಲ್ಲೇಖ:-**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿನಾಂಕ:01-09-2007.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007, ದಿನಾಂಕ:15-10-2007.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007, ದಿನಾಂಕ:14-11-2007.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2007, ದಿನಾಂಕ:23-04-2011.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007, ದಿನಾಂಕ:29-11-2017.
6. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 29 ಶಾಸನ 2018, ದಿನಾಂಕ: 01/03/2019.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2018(1), ದಿನಾಂಕ: 23/05/2019.
8. ಸರ್ಕಾರದ ಪತ್ರ ಸಂಖ್ಯೆ: ಇಡಿ 12 ಇಟಿಆರ್ 2018(2), ದಿನಾಂಕ: 23/05/2019.

* * *

"ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು - 2007" ಮತ್ತು ಉಲ್ಲೇಖ-5ರ ನಿಯಮಗಳನ್ವಯ ಪ್ರಾಚಾರ್ಯರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ, 2018-19ನೇ ಸಾಲಿಗೆ ಪ್ರಾಚಾರ್ಯರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು. ಈ ವರ್ಗಾವಣೆಗೆ ಅರ್ಜಿಗಳನ್ನು ಆನ್‌ಲೈನ್ (ON-LINE) ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ.

## I. ಸಾಮಾನ್ಯ ಸೂಚನೆಗಳು:

1. ಅಧಿನಿಯಮ ಮತ್ತು ನಿಯಮಗಳಲ್ಲಿ ನಿಗಧಿಪಡಿಸಿರುವ ವಿಧಿ ವಿಧಾನಗಳನ್ವಯ ಪ್ರಾಚಾರ್ಯರ ವರ್ಗಾವಣೆಯನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು.
2. ಪ್ರಾಚಾರ್ಯರ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವರ್ಗಾವಣೆ ವಿಧಗಳಿಗೆ:
   - I. ಕಡ್ಡಾಯ ವರ್ಗಾವಣೆಗಳು.
   - II. ಕೋರಿಕೆ ವರ್ಗಾವಣೆಗಳು.
   - III. ಪರಸ್ಪರ ವರ್ಗಾವಣೆಗಳು.
   - IV. ದೂರಿನ ಪ್ರಕರಣಗಳ ವರ್ಗಾವಣೆ.

3. ವರ್ಗಾವಣೆಗಳಿಗೆ ನಿಗದಿಪಡಿಸಿರುವ ಮಿತಿಗಳು:

| ಕ್ರ.ಸಂ. | ವರ್ಗಾವಣೆ ವಿಧ | ವರ್ಗಾವಣೆಗೆ ಮಿತಿಗಳು |
|---|---|---|
| 1 | ಕಡ್ಡಾಯ ವರ್ಗಾವಣೆಗಳು | ಶೇ.5 |
| 2 | ಕೋರಿಕೆ ವರ್ಗಾವಣೆಗಳು | ಶೇ.5 |
| 3 | ದೂರು ಪ್ರಕರಣಗಳ ವರ್ಗಾವಣೆ | ಮಿತಿ ಇಲ್ಲ |

4. **ವರ್ಗಾವಣಾ ಅಧಿನಿಯಮದಂತೆ ಪರಿಭಾಷೆಗಳು:**
   - I. "ಗರಿಷ್ಠ ಅವಧಿ" ಎಂದರೆ, ಒಂದು ವಲಯದಲ್ಲಿ ಬೇರೆ ಬೇರೆ ವೃಂದಗಳಲ್ಲಿ ಒಟ್ಟಾರೆ ಸಲ್ಲಿಸಿರುವ ಹತ್ತು ವರ್ಷಗಳ ನಿರಂತರ ಸೇವೆ ("maximum period" means a continuous service of ten years in a zone in a different cadres put together)
   - II. "ಕನಿಷ್ಠ ಅವಧಿ" ಎಂದರೆ, ಒಂದು ವಲಯದಲ್ಲಿ ಬೇರೆ ಬೇರೆ ವೃಂದಗಳಲ್ಲಿ ಒಟ್ಟಾರೆ ಸಲ್ಲಿಸಿರುವ ಮೂರು ವರ್ಷಗಳ ನಿರಂತರ ಸೇವೆ ("minimum period" means a continuous service of three years in a zone in a different cadres put together) ಎಂಬುದಾಗಿ ವ್ಯಾಖ್ಯಾನಿಸತಕ್ಕದ್ದು.

5. 2018-19 ನೇ ಸಾಲಿಗೆ ವರ್ಗಾವಣೆ ಬಯಸುವ ಪ್ರಾಚಾರ್ಯರು ಅಂತರ್ಜಾಲದ (on-line) (www.pue.kar.nic.in) ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬಹುದು. ಈ ವರ್ಗಾವಣೆಗೆ ಪರೀಕ್ಷಾರ್ಥ ಅವಧಿ [ಸೇವಾವಧಿ] ತೃಪ್ತಿಕರವಾಗಿ ಪೂರೈಸಿ ಘೋಷಿಸಲ್ಪಟ್ಟ ಪ್ರಾಚಾರ್ಯರು ಮಾತ್ರ ಅರ್ಹರಿರುತ್ತಾರೆ.
6. ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **27/07/2019.**
7. ಅಮಾನತ್ತುಗೊಂಡ ನಂತರದಲ್ಲಿ ಶಿಸ್ತುಕ್ರಮ ಬಾಕಿ ಇರಿಸಿ ಅಮಾನತ್ತು ತೆರವುಗೊಳಿಸಿ ಸ್ಥಳ ನಿಯುಕ್ತಿಗೊಂಡ ಪ್ರಾಚಾರ್ಯರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
8. ಕೋರಿಕೆ ಮೇರೆಗೆ ಅಥವಾ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವಂತಿಲ್ಲ ಅಥವಾ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ

ಕೋರಿಕೆ ಅಥವಾ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸುವಂತಿಲ್ಲ. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.

9. ಯಾವುದೇ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅದೇ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಮಾತ್ರ ಅವಕಾಶವಿರುತ್ತದೆ. ಕೌನ್ಸೆಲಿಂಗ್ ಸಮಯದಲ್ಲಿ ಆದ್ಯತೆ ಬದಲಾಯಿಸಲು ಅಥವಾ ಸಾಮಾನ್ಯ ವರ್ಗದಡಿಯಲ್ಲಿ ವರ್ಗಾವಣೆಗೆ ಅವಕಾಶವಿರುವುದಿಲ್ಲ.
10. ವರ್ಗಾವಣೆಯನ್ನು ನಿಗದಿಪಡಿಸಿರುವ ತಾತ್ಕಾಲಿಕ ವೇಳಾಪಟ್ಟಿಯಂತೆ ನಡೆಸಲಾಗುವುದು.
11. **ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 12 ಇಟಿಆರ್ 2018(2), ದಿನಾಂಕ: 23/05/2019 ರಂತೆ ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸದೇ ಇರುವ ಪ್ರಾಚಾರ್ಯರು ವರ್ಗಾವಣೆಗೆ ಅರ್ಹರಾಗಿರುವುದಿಲ್ಲ.**
12. ನಿಯಮ-14 ಮತ್ತು 16ರಂತೆ ಆದ್ಯತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

13. **ಕಡ್ಡಾಯ ವರ್ಗಾವಣೆಗೆ ಮಾರ್ಗಸೂಚಿಗಳು:**

I. "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು-2017," ಕುರಿತಾದ ವರ್ಗಾವಣಾ ನಿಯಮ-6, 7 ಮತ್ತು 8ರಲ್ಲಿನಂತೆ ಇರುತ್ತವೆ. ನಿಯಮ-5 ರಲ್ಲಿನ ಅವಕಾಶಗಳಂತೆ ಒಟ್ಟು ಕಡ್ಡಾಯ ವರ್ಗಾವಣೆಗಳ ಪ್ರಮಾಣ ಶೇಕಡ 5ರಷ್ಟು ಇರುತ್ತದೆ.

II. ನಿಯಮ-21(4)ರಂತೆ ನಿರ್ದಿಷ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತಹ ಪ್ರಾಚಾರ್ಯರು ಈಗಾಗಲೇ 'ಎ' ವಲಯದಲ್ಲಿ ಸತತ ಹತ್ತು ವರ್ಷಗಳ ಗರಿಷ್ಠ ಸೇವಾವಧಿಯನ್ನು ಪೂರೈಸಿದ್ದಲ್ಲಿ ಕೋರಿಕೆ ವರ್ಗಾವಣೆಗಳ ನಂತರ ಅಂತಹ ಪ್ರಾಚಾರ್ಯರಿಗೆ ಕಡ್ಡಾಯ ವರ್ಗಾವಣೆಯನ್ನು ಹಮ್ಮಿಕೊಂಡು 'ಸಿ' ವಲಯಧ ಹುದ್ದೆಗೆ ಕಡ್ಡಾಯವಾಗಿ ವರ್ಗಾವಣೆಗೊಳಿಸಲಾಗುವುದು.

III. ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳ್ಳಬೇಕಾದ ವೇಳಾಪಟ್ಟಿಯನ್ನು ನಿಯಮ-6ರಲ್ಲಿ ನಿರ್ದಿಷ್ಟ ಪಡಿಸಲಾಗಿದೆ. ಅದರಂತೆ, ಮೊದಲನೇ ಹಂತದ ಕೋರಿಕೆ ವರ್ಗಾವಣೆಗಳನ್ನು ಹಮ್ಮಿಕೊಂಡ ನಂತರ ನಿಯಮ-21(4) ರಂತೆ ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಅದರಂತೆ, ಈ ಹಂತದಲ್ಲಿ ತಿದ್ದುಪಡಿ ಕಾಯ್ದೆ ಸೆಕ್ಷನ್ 3(ಎ)(1,2)ರಂತೆ 1ನೇ ಹಂತದಲ್ಲಿ "ಎ" ವಲಯದಿಂದ 'ಬಿ' ವಲಯದಲ್ಲಿ ಲಭ್ಯವಿರುವ ಖಾಲಿ ಹುದ್ದೆಗೆ ಹಾಗೂ ಮುಂದಿನ ಹಂತದಲ್ಲಿ 'ಎ' ವಲಯದಿಂದ 'ಸಿ' ವಲಯಕ್ಕೆ ಕಡ್ಡಾಯ ವರ್ಗಾವಣೆಯನ್ನು ಹಮ್ಮಿಕೊಳ್ಳಲಾಗುವುದು.

IV. ಕಡ್ಡಾಯ ವರ್ಗಾವಣೆಗೆ ಗುರುತಿಸಲಾಗುವ ಪ್ರಾಚಾರ್ಯರು ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸುವುದನ್ನು ನಿರ್ಬಂಧಿಸಿದೆ.

V. ಕಡ್ಡಾಯ ವರ್ಗಾವಣೆಗೆ ಕಾಯ್ದೆ ಸೆಕ್ಷನ್ 3(ಎ)ರಂತೆ ಖಾಲಿ ಹುದ್ದೆಗಳನ್ನು ಅಧಿಸೂಚಿಸುವ ಕ್ರಮಗಳು ಹಾಗೂ 10 ವರ್ಷ ಗರಿಷ್ಠ ಸೇವಾವಧಿಯನ್ನು 'ಎ' ವಲಯದಲ್ಲಿ ಪೂರೈಸಿರುವ ಪ್ರಾಚಾರ್ಯರನ್ನು ಗುರುತಿಸುವ ಕ್ರಮಗಳು: 'ಎ' ವಲಯದಲ್ಲಿ ಹತ್ತು ವರ್ಷಗಳ ಸತತ ಸೇವೆಯ ಗರಿಷ್ಠ ಅವಧಿಯ ಯಾವುದೇ

ವೃಂದದಲ್ಲಿ ಸಲ್ಲಿಸಿರಬಹುದಾದ ಒಗ್ಗೂಡಿಸಿದ ನಿರಂತರ ಸೇವೆ ("maximum period" means a continuous service of ten years in a zone in a different cadres put together) ಎಂಬುದಾಗಿ ವ್ಯಾಖ್ಯಾನಿಸತಕ್ಕದ್ದು. ಪರಂತು, ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಚಾರ್ಯರ ಸಂಘ ಅಥವಾ ಕರ್ನಾಟಕ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಯಾಗಿರುವ ಪ್ರಾಚಾರ್ಯರಿಗೆ, ಅವಿವಾಹಿತ ಮಹಿಳಾ ಪ್ರಾಚಾರ್ಯರರು, ವಿಧವಾ ಮಹಿಳಾ ಪ್ರಾಚಾರ್ಯರು, ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿನ ಅಂಗವಿಕಲತೆಯನ್ನು ಹೊಂದಿರುವ ಪ್ರಾಚಾರ್ಯರನ್ನು 6ನೇ ಪ್ರಕರಣದ (2)ನೇ ಉಪ-ಪ್ರಕರಣದ 4ನೇ ಮತ್ತು 5ನೇ ಖಂಡದ ಅಡಿಯಲ್ಲಿ ಬರುವ ಪ್ರಕರಣಗಳನ್ನು ಹೊರತುಪಡಿಸಿದಂತೆ, ಈ ಉಪ ಪ್ರಕರಣದ ಉಪಬಂಧದಿಂದ ವಿನಾಯಿತಿಯನ್ನು ನೀಡಲಾಗಿದೆ.

14. <u>ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು:</u>

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2017ರನ್ವಯ ಹಾಗೂ ಅದರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2017ರಲ್ಲಿನ ನಿಯಮ-12ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದು ನಿಯಮ-14ರಲ್ಲಿನ ಅವಕಾಶಗಳಂತೆ ಆದ್ಯತೆಯನ್ನು ಕೋರಿ ಅರ್ಜಿ ಸಲ್ಲಿಸತಕ್ಕದ್ದು. **750 ವಿದ್ಯಾರ್ಥಿಗಳ ಸಂಖ್ಯೆ ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಖಾಲಿ ಇರುವ ಪ್ರಾಚಾರ್ಯರ ಹುದ್ದೆಗೆ ವರ್ಗಾವಣೆ ಬಯಸಿದ್ದಲ್ಲಿ ಈ ಕೆಳಕಂಡ ಹೆಚ್ಚುವರಿ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.**

- **ಮೇಲೆ ತಿಳಿಸಿರುವ ಕಾಲೇಜಿಗೆ ವರ್ಗಾವಣೆ ಬಯಸಿದ್ದಲ್ಲಿ ಅವರು ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಠ 03 ವರ್ಷಗಳ ಅವಧಿಯಲ್ಲಿ 250 ಅಥವಾ ಅದಕ್ಕಿಂತ ಹೆಚ್ಚಿಗೆ ಇರಬೇಕು ಹಾಗು**
- **ಮೇಲೆ ತಿಳಿಸಿರುವ ಕಾಲೇಜಿಗೆ ವರ್ಗಾವಣೆ ಬಯಸಿದ್ದಲ್ಲಿ ಅವರು ಕಾರ್ಯ ನಿರ್ವಹಿಸುತ್ತಿರುವ ಕಾಲೇಜಿನ ಕಳೆದ ಮೂರು ವರ್ಷಗಳ ಶೇಕಡವಾರು ಫಲಿತಾಂಶ 60ಕ್ಕಿಂದ ಹೆಚ್ಚಿಗೆ ಇರಬೇಕು.**

ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ ಆದ್ಯತಾ ಪ್ರಕರಣಗಳ ವಿವರ ಕೆಳಗಿನಂತಿದೆ.

I. <u>ಗಂಭೀರ ಸ್ವರೂಪದ ಖಾಯಿಲೆ ಪ್ರಕರಣಗಳು:-</u> ಅತ್ಯಂತ ತೀವ್ರ ತರವಾದ ಖಾಯಿಲೆಯ ಪ್ರಕರಣಗಳಲ್ಲಿ ಅಧಿನಿಯಮದ 6(2)(4)ರಲ್ಲಿ ಸೂಚಿಸಿರುವಂತೆ ಅವರ ಪತಿ/ಪತ್ನಿ ಅಥವಾ ಮಕ್ಕಳು ಗಂಭೀರ ಖಾಯಿಲೆಯಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಪ್ರಾಚಾರ್ಯರು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿ/ಅವಳಿಗೆ ವೈದ್ಯಕೀಯ ಚಿಕಿತ್ಸೆ ದೊರೆಯುವಂತ ಸ್ಥಳಕ್ಕೆ ವರ್ಗಾವಣೆ ಪಡೆಯುವುದು ಅವಶ್ಯಕವಾಗಿದ್ದಲ್ಲಿ. ಚಿಕಿತ್ಸೆಯ ಸ್ವರೂಪ. ಪ್ರಾಚಾರ್ಯರು

ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದೇ ಇರುವ ಬಗ್ಗೆ ಹಾಗೂ ಅಂತಹ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ನಿರ್ದಿಷ್ಟವಾಗಿ ಜಿಲ್ಲಾ ವೈದ್ಯಕೀಯ ಮಂಡಳಿಯು ಪ್ರಮಾಣಿಸಲ್ಪಟ್ಟ ಪ್ರಸಕ್ತ ಸಾಲಿಗೆ ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಮಾತ್ರ ವೈದ್ಯಕೀಯ ಪ್ರಕರಣದಲ್ಲಿ ಪರಿಗಣಿಸಲಾಗುವುದು( ನಮೂನೆ-1) ಉದಾ: ಹೃದಯ ಸಂಬಂಧಿ, ಕಿಡ್ನಿ, ಕ್ಯಾನ್ಸರ್ ಮತ್ತು ಹೆಚ್.ಐ.ವಿ. ಖಾಯಿಲೆಗಳಿಂದ ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಇಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು. ಪತಿ-ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಯಾರಾದರೂ ಒಬ್ಬರು ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.

II. **ತೆರೆದ ಹೃದಯ ಶಸ್ತ್ರ ಚಿಕಿತ್ಸೆ ಅಂಗಾಂಗ ಕಸಿ / ಮರು ಜೋಡಣಾ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುವ ಪ್ರಕರಣಗಳು:** ಸೂಕ್ತ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಮಾತ್ರ ಪರಿಗಣಿಸಲಾಗುವುದು.

III. **ದೈಹಿಕ ಅಂಗವಿಕಲ ಪ್ರಕರಣಗಳು:** ಅಂಗವಿಕಲತಾ ಮೀಸಲಾತಿಯಲ್ಲಿ ನೇಮಕಾತಿ ಹೊಂದಿರಬೇಕು ಹಾಗೂ ದೈಹಿಕ ಅಂಗವಿಕಲ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ಪ್ರಮಾಣೀಕರಿಸಲಾದಂತೆ **ಶೇಕಡ 40 ಕ್ಕಿಂತ ಹೆಚ್ಚಿನ ದೈಹಿಕ ಅಶಕ್ತತೆ ಇರುವ ಬಗ್ಗೆ ಜಿಲ್ಲಾ ಶಸ್ತ್ರವೈದ್ಯರು ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಇಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು.**

IV. **ವಿಧವಾ ಪ್ರಾಚಾರ್ಯರ ಪ್ರಕರಣಗಳು:** ಪತಿಯ ಮರಣ ಸಮರ್ಥನಾ ಪ್ರಮಾಣ ಪತ್ರ ಅಥವಾ ವಿಧವಾ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದಾದರೂ ಒಂದು ಕಾನೂನಾತ್ಮಕ ದಾಖಲೆಯನ್ನು ಹಾಜರುಪಡಿಸುವುದು. ಜೊತೆಗೆ ಪತಿ-ಪತ್ನಿ ಕುರಿತಾಗಿ ಸೇವಾ ಪುಸ್ತಕದ ಉಧೃತ, ಚುನಾವಣಾ ಗುರುತಿನ ಚೀಟಿ, ಇತರೆ ಯಾವುದಾದರೂ ಕಾನೂನಾತ್ಮಕ ಗುರುತಿನ ಪತ್ರ.

V. **ಅವಲಂಬಿತ ಮಕ್ಕಳಿರುವ ವಿಚ್ಛೇದಿತ ಮಹಿಳಾ ಪ್ರಾಚಾರ್ಯರ ಪ್ರಕರಣ:** ವಿಚ್ಛೇದನೆಯಾಗಿರುವ ಬಗ್ಗೆ ನ್ಯಾಯಾಲಯ ನೀಡಿರುವ ಡಿಕ್ರಿ ಪ್ರತಿ ಮತ್ತು ಮರು ಮದುವೆಯಾಗಿಲ್ಲದಿರುವ ಬಗ್ಗೆ ಹಾಗೂ ಅವಲಂಬಿತ ಮಕ್ಕಳಿರುವ ಬಗ್ಗೆ ಇತ್ತೀಚಿನ ದಿನಾಂಕದಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಿಂದ ಪಡೆದ ಘೋಷಣಾ ಪತ್ರವನ್ನು ಸಲ್ಲಿಸತಕ್ಕದ್ದು.

VI. **ನಿವೃತ್ತ/ಮೃತ/ಅಂಗವಿಕಲ ಸೈನಿಕ ಪ್ರಕರಣಗಳು:** ಭಾರತೀಯ ರಕ್ಷಣಾ ಪಡೆ/ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಮೃತರಾಗಿರುವ ಅವಲಂಬಿತರಿಗೆ (ಒಂದು ಸಲದ ಕ್ರಮವಾಗಿ) / ನಿವೃತ್ತರಾಗಿರುವ ಅವಲಂಬಿತರಿಗೆ (ಒಂದು ಸಲದ ಕ್ರಮವಾಗಿ) ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿರವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸಿವುದು.

VII. **ವಿವಾಹಿತ ಪ್ರಾಚಾರ್ಯರ ಪ್ರಕರಣಗಳು:**

i. ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿರುವ ಪ್ರಕರಣಗಳು: ಪತಿ ಮತ್ತು ಪತ್ನಿ ಇಬ್ಬರೂ ರಾಜ್ಯ ಸರ್ಕಾರಿ ನೌಕರರಾಗಿರುವ ಪ್ರಕರಣಗಳು. ರಾಜ್ಯ ಸರ್ಕಾರ ಅಥವಾ ಕೇಂದ್ರ/ರಾಜ್ಯ ಸರ್ಕಾರಿ ನೌಕರರಾಗಿದ್ದರೆ ಅಥವಾ ಸಾರ್ವಜನಿಕ ವಲಯದ ಉದ್ದಿಮೆಯ ಖಾಯಂ ನೌಕರರಾಗಿದ್ದರೆ ಅಥವಾ ಪ್ರಾಯೋಜಕತ್ವದ ಸೊಸೈಟಿಯಲ್ಲಿನ ಖಾಯಂ ನೌಕರರಾಗಿದ್ದಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕಿನ ಖಾಯಂ ಉದ್ಯೋಗಿಯಾಗಿದ್ದರೆ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಸಹ ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದು. ನೇಮಕಾತಿ ಪ್ರಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರವನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪತಿ–ಪತ್ನಿ ಪ್ರಕರಣದಡಿ ಅರ್ಜಿ ಸಲ್ಲಿಸಿದ್ದಲ್ಲಿ ಪತಿ ಅಥವಾ ಪತ್ನಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇದ್ದಲ್ಲಿ ಅಂತಹ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳತಕ್ಕದ್ದು. ಬೇರೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಒಂದು ವೇಳೆ ಪತಿ ಅಥವಾ ಪತ್ನಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಅತಿ ಸಮೀಪದ ಖಾಲಿ ಇರುವ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

- ಸರ್ಕಾರಿ ನೌಕರರು ಎಂಬುದಕ್ಕೆ ಕೆ.ಜಿ.ಐ.ಡಿ. ಸಂಖ್ಯೆ ಮತ್ತು ಹೆಚ್.ಆರ್.ಎಂ.ಎಸ್: ಹಾಗೂ ಸೇವಾ ದೃಢೀಕರಣ ಪ್ರತಿಯನ್ನು ಸಲ್ಲಿಸತಕ್ಕದ್ದು.
- ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕೆ.ಪಿ.ಟಿ.ಸಿ.ಎಲ್. ಜಲಮಂಡಳಿ. ಮಹಾನಗರ ಪಾಲಿಕೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನೂ ಸಹ ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದು. ಈ ಕುರಿತಂತೆ ಅಗತ್ಯ ದೃಢೀಕರಣ ಮತ್ತು ದಾಖಲೆಗಳನ್ನು ಸಲ್ಲಿಸತಕ್ಕದ್ದು ಮತ್ತು ಖಾಯಂ ನೌಕರರು ಎಂಬ ಬಗ್ಗೆ ಸ್ಪಷ್ಟ ದಾಖಲೆ ಮತ್ತು ದೃಢೀಕರಣ ಸಲ್ಲಿಸತಕ್ಕದ್ದು.
- ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ರೈಲ್ವೇ ಇಲಾಖೆ, ದೂರದರ್ಶನ, ಆಕಾಶವಾಣಿ, ಅಂಚೆ ಇಲಾಖೆ, ರಕ್ಷಣಾ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಇಸ್ರೋ, ಹೆಚ್.ಎ.ಎಲ್. ಎನ್.ಎ.ಎಲ್. ಬಿ.ಹೆಚ್.ಇ.ಎಲ್. ಬಿ.ಇ.ಎಲ್., ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಎಂಬುದಾಗಿ ಅಧಿಕೃತರಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪ್ರಕರಣಗಳು.

ix **ಇತರೆ ಮಹಿಳಾ ಪ್ರಾಚಾರ್ಯರ ಪ್ರಕರಣಗಳು.**

**X ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಸ್ಥೆಗಳ ಚುನಾಯಿತ ಪದಾಧಿಕಾರಿಗಳು:**

ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಚಾರ್ಯರ ಸಂಘ ಅಥವಾ ಕರ್ನಾಟಕ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಯಾಗಿದ್ದಲ್ಲಿ, ಎಷ್ಟನೇ ಬಾರಿಗೆ ಆಯ್ಕೆಯಾಗಿರುತ್ತಾರೆ. ಆಯ್ಕೆಯಾದ ಅವಧಿ ವಿವರಗಳುಳ್ಳ ಒಂದು ಪ್ರಮಾಣ ಪತ್ರವನ್ನು

ಕಡ್ಡಾಯವಾಗಿ ಸಲ್ಲಿಸತಕ್ಕದ್ದು. (ಉದಾಹರಣೆಗೆ:- ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿ ಆಯ್ಕೆಯಾಗಿದ್ದಲ್ಲಿ ಪದಾಧಿಕಾರಿಯಾಗಿ ಆಯ್ಕೆಯಾಗಿರುವ ಬಗ್ಗೆ ಚುನಾವಣಾಧಿಕಾರಿ/ತಹಶೀಲ್ದಾರರು ನೀಡಿರುವ ಮೂಲ ಪ್ರಮಾಣ ಪತ್ರ ಒದಗಿಸತಕ್ಕದ್ದು). ನಾಮ ನಿರ್ದೇಶನ ಮಾಡಿಕೊಂಡ ಪದಾಧಿಕಾರಿಗಳು ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ. **(ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007ರ ನಿಯಮ 8(10)ರಲ್ಲಿನ ಅವಕಾಶದಂತೆ)**

**xi** **ಇತರೆ ಪುರುಷ ಉಪನ್ಯಾಸಕರು.**

**xii** **ಪರಸ್ಪರ ವರ್ಗಾವಣೆ ಪ್ರಕರಣಗಳು:**

i. ಎಲ್ಲಾ ಪರಸ್ಪರ ವರ್ಗಾವಣೆಗಳನ್ನು ಇಬ್ಬರೂ ಪ್ರಾಚಾರ್ಯರ ಒಪ್ಪಿಗೆ ಇದ್ದಲ್ಲಿ ಮಾತ್ರ ಪರಿಗಣಿಸಲಾಗುವುದು.

ii. ಪರಸ್ಪರ ವರ್ಗಾವಣೆ ಬಯಸುವ ಪ್ರಾಚಾರ್ಯರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ನಿವೃತ್ತಿ ಹೊಂದಲು ಮೂರು ವರ್ಷಕ್ಕಿಂತ ಹೆಚ್ಚಿನ ಸೇವೆ ಹೊಂದಿರಬೇಕು ಹಾಗೂ ಮೂರು ವರ್ಷಕ್ಕಿಂತ ಕಡಿಮೆ ಅವಧಿ ಇರುವ ಪ್ರಾಚಾರ್ಯರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

iii. ***ಪರಸ್ಪರ ವರ್ಗಾವಣೆ ಬಯಸುವ ಪ್ರಾಚಾರ್ಯರು ಸಹ ಕೌನ್ಸೆಲಿಂಗ್‌ನಲ್ಲಿ ತಪ್ಪದೇ ಹಾಜರಾಗತಕ್ಕದ್ದು, ಹಾಜರಾಗದೇ ಇದ್ದಲ್ಲಿ ಪರಸ್ಪರ ವರ್ಗಾವಣೆಯನ್ನು ಪಡೆಯಲು ಇಚ್ಛಿಸುವುದಿಲ್ಲವೆಂದು ಭಾವಿಸಿ ಮನವಿಯನ್ನು ತಿರಸ್ಕರಿಸಲಾಗುವುದು.***

iv. 'ಎ' ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಚಾರ್ಯರು ಪ್ರಸ್ತುತ ಸ್ಥಳದಲ್ಲಿ ಏಳು ವರ್ಷಗಳ ಅಥವಾ ಹೆಚ್ಚಿನ ಸತತ ಸೇವೆಯನ್ನು ಪೂರೈಸಿರಬಾರದು.

v. ಪರಸ್ಪರ ವರ್ಗಾವಣೆ ಬಯಸುವ ಪ್ರಾಚಾರ್ಯರು ಕೇವಲ ಒಬ್ಬರೊಂದಿಗೆ ಮಾತ್ರ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಬೇಕು. ಒಂದಕ್ಕಿಂತ ಹೆಚ್ಚು ಜನರೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

vi. 'ಎ' ವಲಯದಿಂದ 'ಎ' ವಲಯಕ್ಕೆ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ.

vii. ಈ ಹಿಂದೆ ಒಂದು ಬಾರಿ ಪರಸ್ಪರ ವರ್ಗಾವಣೆಯನ್ನು ಪಡೆದಿದ್ದಲ್ಲಿ ಅಂತಹ ಪ್ರಾಚಾರ್ಯರು ಪುನಃ ಪರಸ್ಪರ ವರ್ಗಾವಣೆಗೆ ಅರ್ಹರಾಗಿರುವುದಿಲ್ಲ.

17. *ಅರ್ಜಿ ನಮೂನೆಯಲ್ಲಿ ಸೇವಾ ವಿವರ ನಮೂದಿಸುವಾಗ ನಿಯಮ 7(2) ರ ಪ್ರಕಾರ ಆಯಾ ವೃಂದ ಅಂದರೆ ಪ್ರಾಚಾರ್ಯರ ವೃಂದದಲ್ಲಿ ವಿವಿಧ ಹುದ್ದೆಗಳಲ್ಲಿ ಸಲ್ಲಿಸಿರುವ ಸೇವಾ ವಿವರವನ್ನು ಮಾತ್ರ ನಮೂದಿಸತಕ್ಕದ್ದು.*

18. ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017. ದಿನಾಂಕ: 29/11/2017ನ್ನು ಇಲಾಖಾ ಅಂತರ್ಜಾಲ www.pue.kar.nic.in ದಲ್ಲಿ ಅಪ್‌ಲೋಡ್ ಮಾಡಿಕೊಂಡು ನಿಯಮಗಳನ್ನು ಪರಿಶೀಲಿಸಬಹುದು.

## II. *ಗಣಕೀಕೃತ ಕೌನ್ಸೆಲಿಂಗ್ ವರ್ಗಾವಣೆಗೆ ಅಂತರ್ಜಾಲದ ಮೂಲಕ ಆನ್-ಲೈನ್ ಅರ್ಜಿ ಸಲ್ಲಿಸಲು/ಮಾಹಿತಿ ಭರ್ತಿ ಮಾಡುವ ಬಗ್ಗೆ ಸೂಚನೆಗಳು:-*

1. www.pue.kar.nic.in ವಿಳಾಸದಲ್ಲಿ ವರ್ಗಾವಣೆ 2018-19 link ಕ್ಲಿಕ್ ಮಾಡುವುದು. ಕ್ಲಿಕ್ ಮಾಡಿದ ನಂತರ ವರ್ಗಾವಣೆಗೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ಮತ್ತು ಸರ್ಕಾರದ ವರ್ಗಾವಣಾ ನಿಯಮ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29-11-2017 ನಿಯಮಗಳನ್ನು ಓದಿಕೊಳ್ಳುವುದು ಅಥವಾ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. **ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸೂಚನೆಗಳ ಬಗ್ಗೆ ಈ ಕಛೇರಿ ಸುತ್ತೋಲೆ ಸಂಖ್ಯೆ ಪಪೂಶಿಇ/ಆಡಳಿತ-ಎ/ಪ್ರಾ.ವರ್ಗ/01/2019-20 ದಿನಾಂಕ: 16/07/2019 ಲಿಂಕ್ ಕ್ಲಿಕ್ ಮಾಡಿ ಓದಿಕೊಳ್ಳುವುದು ಅಥವಾ ಡೌನ್‌ಲೋಡ್ ಮಾಡಿಕೊಂಡು ಓದಿಕೊಳ್ಳಬಹುದು.**
3. ಭರ್ತಿ ಮಾಡಿ ಮುದ್ರಿತ ಅರ್ಜಿ ಪಡೆದ ಮೇಲೆ ಅರ್ಜಿಯ ಪ್ರತಿ ಮತ್ತು ಇತರೆ ಪ್ರತಿಗಳನ್ನು ಕಡ್ಡಾಯವಾಗಿ ಪ್ರಾಚಾರ್ಯರಿಂದ ಜಿಲ್ಲಾ ಉಪನಿರ್ದೇಶಕರ ಮೂಲಕ ನಿಗದಿತ ಅವಧಿಯೊಳಗೆ ಸಲ್ಲಿಸುವುದು. ಅವಧಿ ಮುಗಿದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. *ಆಕ್ಷೇಪಣೆಗಳನ್ನು ದಿನಾಂಕ: 22/07/2019ರ ಒಳಗಾಗಿ ಉಪನಿರ್ದೇಶಕರು(ಆಡಳಿತ) ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ, ಬೆಂಗಳೂರು-560012 ಹಾಗೂ ಇ-ಮೇಲ್ ಮೂಲಕ* **pueest2@gmail.com** *ಈ ವಿಳಾಸಕ್ಕೆ ಸಲ್ಲಿಸಬಹುದು.*
5. *ಪ್ರಕಟಿಸಲಾಗುವ ನಿಗದಿತ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ಸದರಿ ದಿನಾಂಕದ ನಂತರ ಸಲ್ಲಿಸಲ್ಪಡುವ ಯಾವುದೇ ಆಕ್ಷೇಪಣೆಗಳನ್ನು ಪುರಸ್ಕರಿಸಲಾಗುವುದಿಲ್ಲ.*
6. *ಕೌನ್ಸೆಲಿಂಗ್ ದಿನಾಂಕಗಳು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಯ ಷರತ್ತಿಗೆ ಒಳಪಟ್ಟಿದೆ ಹೆಚ್ಚಿನ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ನೀಡಲಾಗುವುದು.*

## III. **ದಿನಾಂಕ: 31/07/2019ರ ಒಳಗಾಗಿ ಜಿಲ್ಲಾ ಉಪನಿರ್ದೇಶಕರಿಗೆ ಕಡ್ಡಾಯವಾಗಿ ಕಳುಹಿಸಬೇಕಾಗುವ ದಾಖಲೆಗಳು:-**

1. ಮಾಹಿತಿ ಭರ್ತಿ ಮಾಡಿ ಪಡೆದ ಪ್ರಿಂಟ್‌ಔಟ್‌ನ ಸ್ವಯಂ ದೃಢೀಕೃತ ಮೂಲ ಪ್ರತಿ.
2. ಪರೀಕ್ಷಾರ್ಥ ಸೇವಾವಧಿ ತೃಪ್ತಿಕರವಾಗಿ ಪೂರೈಸಿದ ಬಗ್ಗೆ ಪ್ರಾಚಾರ್ಯರ ಹುದ್ದೆಯಲ್ಲಿ ಘೋಷಿಸಿದ ಆದೇಶದ ಪ್ರತಿ. ಆದೇಶದ ಪ್ರತಿ ಲಭ್ಯವಿಲ್ಲದಿದ್ದಲ್ಲಿ ಸೇವಾ ಪುಸ್ತಕದಲ್ಲಿ ನಮೂದಿಸಿರುವ ದಾಖಲೆ ಆಧಾರದ ಮೇಲೆ ಪ್ರಾಚಾರ್ಯರಿಂದ ಪರೀಕ್ಷಾರ್ಥ ಅವಧಿ ಪೂರೈಸಿರುವ ಬಗ್ಗೆ ಮೂಲ ಪ್ರಮಾಣ ಪತ್ರ ಸಲ್ಲಿಸಬೇಕು.
3. ಅತ್ಯಂತ ತೀವ್ರತರವಾದ ಖಾಯಿಲೆಯ ಪ್ರಕರಣಗಳಲ್ಲಿ ವೈದ್ಯಕೀಯ ಆದ್ಯತೆ ಕೋರಿದ್ದಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿ ನೀಡಿರುವ ಮೂಲ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸುವುದು

(ನಮೂನೆ-1) ಉದಾಃ ಹೃದಯ ಸಂಬಂಧಿ, ಕಿಡ್ನಿ, ಕ್ಯಾನ್ಸರ್ ಮತ್ತು ಹೆಚ್.ಐ.ವಿ. ಖಾಯಿಲೆಗಳಿಂದ ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಶಿಸ್ತಿನ ಕ್ರಮ ಜರುಗಿಸಲಾಗುವುದು.

4. ಅಂಗವಿಕಲ ಆದ್ಯತೆ ಕೋರಿದ್ದಲ್ಲಿ ಶೇಕಡ 40ಕ್ಕಿಂತ ಹೆಚ್ಚಿನ ಅಶಕ್ತತೆ ಹೊಂದಿರುವ ಜಿಲ್ಲಾ ಶಸ್ತ್ರ ಚಿಕಿತ್ಸಕರು ನೀಡಿರುವ ಮೂಲ ಪ್ರಮಾಣ ಪತ್ರ ಮತ್ತು ಒಂದು ಫೋಟೋ ಪ್ರತಿ.(ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)
5. ವಿಧವೆ ಪ್ರಕರಣದಲ್ಲಿ ಆದ್ಯತೆ ಪಡೆದಿದ್ದಲ್ಲಿ ಪತಿಯ ಮರಣ ಸಮರ್ಥನಾ ಮೂಲ ಪ್ರಮಾಣ ಪತ್ರ ಮತ್ತು ಒಂದು ಫೋಟೊ ಪ್ರತಿ. (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)
6. ಸೈನಿಕ ಸೇವೆಯ ಆದ್ಯತೆ ಪಡೆದಿದ್ದಲ್ಲಿ ಸೂಕ್ತ ಪ್ರಾಧಿಕಾರ ನೀಡಿರುವ ಮೂಲ ಸಮರ್ಥನಾ ಪ್ರಮಾಣ ಪತ್ರ. (ಅಂದರೆ ಭಾರತೀಯ ರಕ್ಷಣಾ ಪಡೆ / ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಕಾರ್ಯ ನಿರ್ವಹಿಸುತ್ತಿರುವ / ಮೃತರಾಗಿರುವ / ನಿವೃತ್ತರಾಗಿರುವ / ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿ – ಮಿಲಿಟರಿ ಸೇವೆಯಲ್ಲಿರುವ ಬಗ್ಗೆ. ಮೃತರಾಗಿರುವ ಬಗ್ಗೆ. ನಿವೃತ್ತರಾಗಿರುವ ಬಗ್ಗೆ ಶಾಶ್ವತ ಅಂಗವಿಕಲ ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರವನ್ನು ತರತಕ್ಕದ್ದು) (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)
7. ಪತಿ – ಪತ್ನಿ ಪ್ರಕರಣದಲ್ಲಿ ಆದ್ಯತೆ ಪಡೆದಿದ್ದಲ್ಲಿ ನಿಗದಿಪಡಿಸಿದ ನಮೂನೆ 2ರಲ್ಲಿ ಪತಿ/ಪತ್ನಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಿಂದ ಪಡೆದ ಮೂಲ ಪ್ರಮಾಣ ಪತ್ರ. (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)
8. ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಪ್ರಕರಣದಲ್ಲಿ ಆದ್ಯತೆ ಪಡೆದಿದ್ದಲ್ಲಿ ಸಂಘದ ಪದಾಧಿಕಾರಿಯಾಗಿ ಆಯ್ಕೆಯಾಗಿರುವ ಬಗ್ಗೆ ನೀಡಿರುವ ಆಯ್ಕೆ ಮೂಲ ಪ್ರಮಾಣ ಪತ್ರ. (ಉದಾಹರಣೆಗೆಃ- ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿ ಆಯ್ಕೆಯಾಗಿದ್ದಲ್ಲಿ ಪದಾಧಿಕಾರಿಯಗಿ ಆಯ್ಕೆಯಾಗಿರುವ ಬಗ್ಗೆ ಚುನಾವಣಾಧಿಕಾರಿ/ತಹಶೀಲ್ದಾರರು ನೀಡಿರುವ ಪ್ರಮಾಣ ಪತ್ರ ಒದಗಿಸತಕ್ಕದ್ದು) (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)
9. ವಲಯವಾರು ಸಲ್ಲಿಸಿರುವ ಸೇವಾ ಅವಧಿ ಕುರಿತು ಸೇವಾ ಪುಸ್ತಕ ಆಧಾರದ ಮೇಲೆ ಪ್ರಾಚಾರ್ಯರಿಂದ ದೃಢೀಕರಿಸಿ ನೀಡಿರುವ ಮೂಲ ವಿವರಣಾ ಪತ್ರ (ನಮೂನೆ-3)
10. ಪರಸ್ಪರ ವರ್ಗಾವಣೆಗೆ ಮಾಹಿತಿ ಭರ್ತಿ ಮಾಡಿ ಪಡೆದ ಪ್ರಿಂಟ್‌ಔಟ್‌ನ ಪ್ರತಿ.
11. ಪರಸ್ಪರ ವರ್ಗಾವಣೆ ಬಯಸುವ ಇಬ್ಬರೂ ಪ್ರಾಚಾರ್ಯರೂ ಸಹ ಕೌನ್ಸಲಿಂಗ್‌ನಲ್ಲಿ ಭಾಗವಹಿಸಲೇಬೇಕು.
12. ಕೌನ್ಸಲಿಂಗ್‌ಗೆ ಹಾಜರಾಗುವ ಪ್ರಾಚಾರ್ಯರು ಕಡ್ಡಾಯವಾಗಿ ಇಲಾಖೆಯು ನೀಡಿರುವ ಭಾವಚಿತ್ರವುಳ್ಳ ಗುರುತಿನ ಸೇವಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು.
13. ಅನ್ವಯಿಸುವ ದಾಖಲೆಗಳನ್ನು ಹಾಜರುಪಡಿಸದೇ ಇಲ್ಲದೇ ಕೌನ್ಸಲಿಂಗ್‌ಗೆ ನೀಡದೇ ತಿರಸ್ಕರಿಸಲಾಗುವುದು.

**ವಿಶೇಷ ಸೂಚನೆ:-** ವರ್ಗಾವಣೆಗೆ ಸಂಬಂಧಿಸಿದಂತೆ, ಯಾವುದೇ ಸುಳ್ಳು / ತಪ್ಪು ಮಾಹಿತಿ ನೀಡಿದ್ದಲ್ಲಿ, ಶಿಸ್ತು ಕ್ರಮಕ್ಕೆ ಗುರಿ ಪಡಿಸಲಾಗುವುದು. ಒಮ್ಮೆ ನಮೂದಿಸಿದ ಕೆ.ಜಿ.ಐ.ಡಿ ಸಂಖ್ಯೆಯನ್ನು ಮತ್ತೊಮ್ಮೆ ಪುನರಾವರ್ತನೆ ಮಾಡಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿ ಸಲ್ಲಿಸಿದ ಸಮಯದಲ್ಲಿ ಪ್ರತಿಯೊಂದು ಅಂಶದ ಬಗ್ಗೆ ಮನವರಿಕೆ ಮಾಡಿಕೊಂಡು ನಮೂದು ಮಾಡಲು ಸೂಚಿಸಿದೆ.

**ಎ.ಬಿ ಮತ್ತು ಸಿ ವಲಯಗಳ ವರ್ಗೀಕರಣ ಮಾನದಂಡ**

| **ಕ್ಷೇತ್ರ** | **ಕಾಲೇಜಿನ ವರ್ಗ** | **ವರ್ಗೀಕರಣದ ಮಾನದಂಡ** | **ಪ್ರತಿ ವರ್ಷದ ಪೂರ್ಣ ಸೇವೆಗೆ ನಿಗದಿಪಡಿಸಿದ ಮಾನದಂಡ** |
|---|---|---|---|
| ನಗರ ಪ್ರದೇಶ | ಎ ವರ್ಗ (ಎ ವಲಯ) | ಎಲ್ಲಾ ಮಹಾನಗರ ಪಾಲಿಕೆ | 1.00 |
| | ಬಿ ವರ್ಗ (ಬಿ ವಲಯ) | ಬೆಂಗಳೂರು ನಗರ ಗಡಿಯಿಂದ 20 ಕಿ.ಮೀ, ಇತರೆ ಮಹಾನಗರ ಪಾಲಿಕೆಗಳ ಗಡಿಯಿಂದ 15 ಕಿ.ಮೀ, ಜಿಲ್ಲಾ ಕೇಂದ್ರ ಸ್ಥಾನಗಳು, ನಗರ ಪಾಲಿಕೆ ಗಡಿಯಿಂದ 10 ಕಿ.ಮೀ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಅಧಿಸೂಚಿತ ಪ್ರದೇಶ ತಾಲ್ಲೂಕು ಕೇಂದ್ರ ಸ್ಥಾನಗಳ ಗಡಿಯಿಂದ 5 ಕಿ.ಮೀ ಒಳಗಿನ ಪ್ರದೇಶಗಳು. | 1.50 |
| ಗ್ರಾಮಾಂತರ ಪ್ರದೇಶ | ಸಿ ವರ್ಗ (ಸಿ ವಲಯ) | ಎ ಮತ್ತು ಬಿ ವರ್ಗದ ಪ್ರದೇಶಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಗ್ರಾಮಾಂತರ ಪ್ರದೇಶಗಳು | 2.00 |

ಮುಂದುವರೆದು ಪ್ರಾಚಾರ್ಯರಿಗೆ ಈ ಕೆಳಕಂಡಂತೆ ಹೆಚ್ಚುವರಿ ಅಂಕಗಳನ್ನು ಗಣನೆಗೆ ಪರಿಗಣಿಸಲಾಗುವುದು.

| **ಕ್ರ.ಸಂ** | **ವಿವರಣೆ** | **ಅಂಕಗಳ ವರ್ಗೀಕರಣ** |
|---|---|---|
| 1. | ಕಳೆದ ಮೂರು ವರ್ಷಗಳ ದ್ವಿತೀಯ ಪಿಯುಸಿ ಪರೀಕ್ಷೆಯ ಶೇಕಡವಾರು ಫಲಿತಾಂಶ 70 ಕ್ಕಿಂತ ಹೆಚ್ಚಾಗಿದ್ದರೆ. | 15 |
| 2. | ಕಳೆದ ಮೂರು ವರ್ಷಗಳ ದ್ವಿತೀಯ ಪಿಯುಸಿ ಪರೀಕ್ಷೆಯ ಶೇಕಡವಾರು ಫಲಿತಾಂಶ 60 ಕ್ಕಿಂತ ಹೆಚ್ಚು 70 ಕ್ಕಿಂತ ಕಡಿಮೆ ಇದ್ದರೆ. | 10 |
| 3. | ಕಳೆದ ಮೂರು ವರ್ಷಗಳ ದ್ವಿತೀಯ ಪಿಯುಸಿ ಪರೀಕ್ಷೆಯ ಶೇಕಡವಾರು ಫಲಿತಾಂಶ 50 ಕ್ಕಿಂತ ಹೆಚ್ಚು 60 ಕ್ಕಿಂತ ಕಡಿಮೆ ಇದ್ದರೆ. | 05 |

ಕಳೆದ ಮೂರು ವರ್ಷಗಳಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸದಿದ್ದಲ್ಲಿ, ಅವರ ಹೆಚ್ಚುವರಿ ಅಂಕಗಳು ಅನುಕ್ರಮವಾಗಿ ಕಡಿಮೆಗೊಳ್ಳುತ್ತವೆ.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ (ಪದವಿ ಪೂರ್ವ) ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಇವರ ಕಾರುಣ್ಯ ಅವಗಾಹನೆಗೆ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಸಚಿವರು, ವಿಧಾನ ಸೌಧ, ಬೆಂಗಳೂರು-ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು(ಆಡಳಿತ), ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, - ಕೌನ್ಸಿಲಿಂಗ್ ಮೇಲುಸ್ತುವಾರಿಗಾಗಿ.
2. ಉಪನಿರ್ದೇಶಕರು(ಆಡಳಿತ), ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, - ಕೌನ್ಸಿಲಿಂಗ್ ಮೇಲುಸ್ತುವಾರಿಗಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳಿಗೆ - ಈ ಬಗ್ಗೆ ತಮ್ಮ ಜಿಲ್ಲೆಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಗಮನಕ್ಕೆ ತರಲು ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲು ಕೋರಿದೆ ಮತ್ತು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಪ್ರಾಚಾರ್ಯರುಗಳ ವರ್ಗಾವಣೆ ಅರ್ಜಿಗಳನ್ನು ಪ್ರಾಚಾರ್ಯರಿಂದ ಪಡೆದು ಒಂದೇ ತಂಡದಲ್ಲಿ ನಿಗದಿತ ದಿನಾಂಕದೊಳಗೆ ಖುದ್ದಾಗಿ ಈ ಕಚೇರಿಗೆ ಸಲ್ಲಿಸುವುದು. ತಪ್ಪಿದಲ್ಲಿ ಮುಂದಿನ ಆಗು ಹೋಗುಗಳಿಗೆ ನಿಮ್ಮನ್ನು ಜವಾಬ್ದಾರಿಯನ್ನಾಗಿ ಮಾಡಲಾಗುವುದು.
4. ಸಹಾಯಕ ನಿರ್ದೇಶಕರು - ಇ-ಆಡಳಿತ, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ - ಅಂತರ್ಜಾಲದಲ್ಲಿ ಮಾಹಿತಿಗಳನ್ನು ಅಳವಡಿಸುವ ಬಗ್ಗೆ ಮತ್ತು ಅಗತ್ಯ ಕ್ರಮಕ್ಕೆ.
5. ಸಹಾಯಕ ನಿರ್ದೇಶಕರು - ಗಣಕ ಶಾಖೆ, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ - ಕೌನ್ಸಿಲಿಂಗ್ ಸಿದ್ಧತೆ ಮತ್ತು ಸಹಕ್ಕಾರಕ್ಕಾಗಿ.
6. ಸೀನಿಯರ್ ಪ್ರೋಗ್ರಾಮರ್ - ಗಣಕ ಶಾಖೆ, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ - ಕೌನ್ಸಿಲಿಂಗ್ ಸಿದ್ಧತೆ ಮತ್ತು ಸಹಕ್ಕಾರಕ್ಕಾಗಿ.
7. ಕಚೇರಿ / ಹೆಚ್ಚುವರಿ ಪ್ರತಿ.